ಪತ್ರಿಕಾ ಪ್ರಕಟಣೆ

**ವೀಆ್ಯಕ್ಟ್ ಮೂಲಕ 13,470ಕ್ಕೂ ಹೆಚ್ಚು ಮಹಿಳಾ ಸಣ್ಣಉದ್ಯಮಿಗಳನ್ನು ಸಬಲೀಕರಣಗೊಳಿಸಿದ ಇಡಿಐಐ ಮತ್ತು ಆಕ್ಸೆಂಚರ್**

ಬೆಂಗಳೂರು, ಫೆಬ್ರುವರಿ 27, 2024: ಭಾರತದ ವಾಣಿಜ್ಯೋದ್ಯಮ ಅಭಿವೃದ್ಧಿ ಸಂಸ್ಥೆ (ಎಂಟರ್‌ಪ್ರೀನರ್ ಶಿಪ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ- ಇಡಿಇಇ) ಅಹಮದಾಬಾದ್ ಆಕ್ಸೆಂಚರ್ ಬೆಂಬಲದೊಂದಿಗೆ ಪ್ರವರ್ತಕ ಉಪಕ್ರಮವಾದ ವುಮೆನ್ ಎಂಟರ್‌ಪ್ರೀನರ್ಸ್ ಆ್ಯಕ್ಸೆಸ್ ಕನೆಕ್ಟ್ ಟ್ರಾನ್ಸ್ ಫಾರ್ಮ್(ವೀಆ್ಯಕ್ಟ್) ಮೂಲಕ ಭಾರತದ 17 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳ 13,470ಕ್ಕೂ ಹೆಚ್ಚು ಸಣ್ಣ ಉದ್ಯಮಿ(ಮೈಕ್ರೋ ಎಂಟರ್ ಪ್ರೀನರ್ಸ್) ಮಹಿಳೆಯರಿಗೆ ಸಮಗ್ರ ತರಬೇತಿ ಮತ್ತು ನೆರವನ್ನು ನೀಡುವ ಮೂಲಕ ಮಹತ್ವದ ಸಾಧನೆ ಮಾಡಿದೆ.

'ಗ್ರಾಮೀಣ ಮಹಿಳಾ ಉದ್ಯಮಿಗಳ ಸಬಲೀಕರಣ'ದ ಉದ್ದೇಶದಿಂದ ವೀಆ್ಯಕ್ಟ್ ಆಹಾರ ಮತ್ತು ಕೃಷಿ ಉದ್ಯಮದ 5,625 ಮಹಿಳಾ ಸೂಕ್ಷ್ಮ ಉದ್ಯಮಿಗಳಿಗೆ, ಕೈಮಗ್ಗ ಮತ್ತು ಕರಕುಶಲ ವಲಯದ 5,921 ಮತ್ತು ಗೃಹೋಪಯೋಗಿ ಸರಬರಾಜು ಕ್ಷೇತ್ರದ 1,924 ಮಹಿಳೆಯರಿಗೆ ಅವರ ಉದ್ಯಮಕ್ಕೆ ಲಾಭದಾಯಕತೆ ಮತ್ತು ಸುಸ್ಥಿರತೆ ಒದಗಿಸಲು ನೆರವನ್ನು ನೀಡಿದೆ.

ವೀಆ್ಯಕ್ಟ್ ಉಪಕ್ರಮವು ಮಾರುಕಟ್ಟೆ ಲಭ್ಯತೆ, ಉತ್ಪನ್ನ ಅಭಿವೃದ್ಧಿ ಮತ್ತು ಹಣಕಾಸು ಲಭ್ಯತೆ ಸೇರಿದಂತೆ ವಿವಿಧ ಅಂಶಗಳನ್ನು ಒಳಗೊಂಡಿದೆ. ಹೆಚ್ಚುವರಿಯಾಗಿ, ಈ ಉಪಕ್ರಮವು ಶಾಸನಬದ್ಧ ಅನುಸರಣೆ ಪ್ರಕ್ರಿಯೆಗಳನ್ನು ಮತ್ತು ಮಹಿಳಾ-ನೇತೃತ್ವದ ವ್ಯವಹಾರಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ತಾಂತ್ರಿಕ ಅಳವಡಿಕೆಯನ್ನು ಸಾಧ್ಯವಾಗಿಸುತ್ತದೆ.

ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲು ವೀಆ್ಯಕ್ಟ್ ತನ್ನ ಸದಸ್ಯರನ್ನು ಬೆಂಬಲಿಸುತ್ತದೆ. ಇದು ಉದ್ಯಮಿಗಳು ತಮ್ಮ ಕಾರ್ಯಾಚರಣೆಗಳನ್ನು ಸುಗಮಗೊಳಿಸಲು ಮತ್ತು ಮಾರುಕಟ್ಟೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಸ್ಪರ್ಧಿಸುವ ಸಲುವಾಗಿ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ವೀಆ್ಯಕ್ಟ್ ಅಡಿಯಲ್ಲಿ, ಅದರ ಸದಸ್ಯರಿಗೆ ವ್ಯಾಪಕ ಶ್ರೇಣಿಯ ವ್ಯಾಪಾರ ಅಭಿವೃದ್ಧಿ ಸೇವೆಗಳನ್ನು ಒದಗಿಸಲಾಗುತ್ತದೆ. ವ್ಯಾಪಾರ ಯೋಜನೆ, ಮಾರ್ಕೆಟಿಂಗ್ ಮತ್ತು ನಿರ್ವಹಣೆಯಂತಹ ವಿವಿಧ ನಿರ್ಣಾಯಕ ಕ್ಷೇತ್ರಗಳಲ್ಲಿ ಬೆಂಬಲವನ್ನು ನೀಡಲಾಗುತ್ತದೆ. ಇದು ಮಹಿಳಾ ಉದ್ಯಮಿಗಳಿಗೆ ತಮ್ಮ ವ್ಯಾಪಾರ ದಕ್ಷತೆಯನ್ನು ಹೆಚ್ಚಿಸಲು, ಲಾಭದಾಯಕತೆಯನ್ನು ಹೆಚ್ಚಿಸಲು ಮತ್ತು ಸುಸ್ಥಿರ ಬೆಳವಣಿಗೆಯನ್ನು ಸಾಧಿಸಲು ಸಹಾಯ ಮಾಡುತ್ತದೆ.

"ನಮ್ಮ ವೀಆ್ಯಕ್ಟ್ ಉಪಕ್ರಮದ ಮೂಲಕ ನೂರಾರು ಮಹಿಳಾ ಸೂಕ್ಷ್ಮ ಉದ್ಯಮಿಗಳಿಗೆ ತರಬೇತಿ ಮತ್ತು ಬೆಂಬಲ ನೀಡಿದ್ದಕ್ಕಾಗಿ ನಾವು ಸಂತೋಷಗೊಂಡಿದ್ದೇವೆ. ಈ ಸಾಧನೆಯು ಮಹಿಳಾ ಉದ್ಯಮಿಗಳನ್ನು ಸಬಲೀಕರಣಗೊಳಿಸುವ ಮತ್ತು ಸ್ಥಳೀಯ ಆರ್ಥಿಕತೆಯಲ್ಲಿ ಧನಾತ್ಮಕ ಬದಲಾವಣೆಗೆ ಚಾಲನೆ ನೀಡುವ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ" ಎಂದು ಇಡಿಐಐನ ಮಹಾನಿರ್ದೇಶಕ ಡಾ. ಸುನಿಲ್ ಶುಕ್ಲಾ ಹೇಳಿದ್ದಾರೆ.

"ಗ್ರಾಮೀಣ ಸಮುದಾಯಗಳಲ್ಲಿ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವುದು ನಮ್ಮ ಗುರಿಯಾಗಿದೆ. ಸೂಕ್ತವಾದ ತರಬೇತಿ ಮತ್ತು ಬೆಂಬಲವನ್ನು ನೀಡುವ ಮೂಲಕ ಮಹಿಳೆಯರು ಯಶಸ್ವಿ ಉದ್ಯಮಿಗಳಾಗಿ ಅಭಿವೃದ್ಧಿ ಹೊಂದಲು ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಗುರಿಯನ್ನು

ನಾವು ಹೊಂದಿದ್ದೇವೆ" ಎಂದು ಇಡಿಐಐ ಯೋಜನೆಗಳ (ಕಾರ್ಪೊರೇಟ್) ವಿಭಾಗದ ನಿರ್ದೇಶಕ ಡಾ. ರಾಮನ್ ಗುಜ್ರಾಲ್ ಹೇಳಿದರು.

ವೀಲ್ಯಾಕ್ಟ್ನ ಮುಖ್ಯಸ್ಥರಾದ ಶ್ರೀ ಸ್ಯಾಮ್ಯುಯೆಲ್ ಮೋಸೆಸ್ ಅಮರನಾಥ್ ಅವರು ಗ್ರಾಮೀಣ ಮಹಿಳಾ ಉದ್ಯಮಿಗಳನ್ನು ಸಶಕ್ತಗೊಳಿಸಲು ಪರಿವರ್ತಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದಾರೆ. ಈ ಹೊಸ ವಿಧಾನವು ಹೊಸ ಉತ್ಪನ್ನ ಅಭಿವೃದ್ಧಿಗೆ ನೆರವಾಗುತ್ತದೆ. ಪ್ಯಾಕೇಜಿಂಗ್ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ಆನ್‌ಲೈನ್ ಮಾರ್ಕೆಟಿಂಗ್, ಸಾಮಾಜಿಕ ಮಾಧ್ಯಮ ಮಾರ್ಕೆಟಿಂಗ್ ಮತ್ತು ಡಿಜಿಟಲ್ ಪಾವತಿಗಳಂತಹ ತಾಂತ್ರಿಕ ಪ್ರಗತಿಗಳನ್ನು ಅಳವಡಿಸಿಕೊಳ್ಳಲು, ಹೊಸ ಗ್ರಾಹಕರನ್ನು ಪಡೆಯಲು ಮತ್ತು ಕಾರ್ಪೊರೇಟ್ ಸಂಬಂಧಗಳನ್ನು ಸ್ಥಾಪಿಸಲು ನವೀನ ತಂತ್ರಗಳನ್ನು ಅಳವಡಿಸಲಾಗುತ್ತದೆ. ಇದರ ಪರಿಣಾಮವಾಗಿ ವಿವಿಧ ಕಾರ್ಪೊರೇಟ್ ಆವರಣಗಳಲ್ಲಿ 100 ಪ್ರದರ್ಶನಗಳನ್ನು ಮತ್ತು ಭಾರತದ 10 ರಾಜ್ಯಗಳು ಮತ್ತು 29 ಜಿಲ್ಲೆಗಳಲ್ಲಿ ತಳಮಟ್ಟದ ಪ್ರದರ್ಶನಗಳನ್ನು ನಡೆಸಲಾಯಿತು.

ಉಪಕ್ರಮದ ಮುಖ್ಯಾಂಶಗಳು:

- 3500 ಕ್ಕೂ ಹೆಚ್ಚು ಶಾಸನಬದ್ಧ ಅನುಸರಣೆ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗಿದೆ
- ಅಮೆಜಾನ್ ಮತ್ತು ಫ್ಲಿಪ್ ಕಾರ್ಟ್ ನಂತಹ ಇ-ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳಲ್ಲಿ 2700 ಕ್ಕೂ ಹೆಚ್ಚು ಸದಸ್ಯರ ಸೇರ್ಪಡೆ
- 2800 ಸದಸ್ಯರಿಗೆ ಉತ್ಪನ್ನ ಅಭಿವೃದ್ಧಿ ಸೇವೆಗಳನ್ನು ಒದಗಿಸಲಾಗಿದೆ
- ತರಬೇತಿ ಕಾರ್ಯಾಗಾರಗಳು ಮತ್ತು ತಿಳುವಳಿಕೆ ಭೇಟಿಗಳಲ್ಲಿ 4000 ಕ್ಕೂ ಹೆಚ್ಚು ಸದಸ್ಯರ ಭಾಗವಹಿಸುವಿಕೆ
- ಪ್ರದರ್ಶನಗಳಲ್ಲಿ 1000ಕ್ಕೂ ಹೆಚ್ಚು ಸದಸ್ಯರ ಪಾಲ್ಗೊಳ್ಳುವಿಕೆ, ಇದರ ಪರಿಣಾಮವಾಗಿ ₹79 ಲಕ್ಷ ಆದಾಯ ಗಳಿಕೆ
- ಒಟ್ಟು ₹45 ಲಕ್ಷಗಳ ಆರ್ಥಿಕ ಸಹಾಯದ ಸೌಲಭ್ಯ
- ವೀಲ್ಯಾಕ್ಟ್ನ ಮಧ್ಯಸ್ಥಿಕೆಯ ನಂತರ ₹2.5 ಕೋಟಿಗಳ ಉದ್ಯಮ ಆದಾಯ ಬೆಳವಣಿಗೆ